4	ಹಿಂದುಳಿದ ತಾಲ್ಲೂಕುಗಳಲ್ಲಿ ವಿಶೇಷ ಕೆಲಸಗಳು (RIDF-NABARD)	52.11
5	ಜಿಲ್ಲಾ ಪಂಚಾಯತ್ ಕೆರೆಗಳ ಪುರ್ನವಸತಿ ಮತ್ತು ಪುನಃಶ್ಚೇತನ	50.00
6	ಕರ್ನಾಟಕ ಗ್ರಾಮೀಣ ಬಡತನ ಹಾಗೂ ಪಂಚಾಯಿತಿ ಯೋಜನೆ ಇ.ಎ.ಪಿ. (ಗ್ರಾಮ ಸ್ವರಾಜ್)	160.03
7	ಗ್ರಾಮೀಣ ನೀರು ಸರಬರಾಜು	100.00
	ಒಟ್ಟು	**662.14**

ಕರ್ನಾಟಕ ವಿಧಾನ ಸಭೆ

121 ಬಾಲಕೃಷ್ಣ ಹೆಚ್.ಸಿ.(ಮಾಗಡಿ)
ಇಂಧನ ಸಚಿವರು.

****

ಅ) 'ಪ್ರಸ್ತುತ ರಾಜ್ಯದಲ್ಲಿ ಗೃಹ ಬಳಕೆ, ಕೃಷಿ ಪಂಪ್ ಸೆಟ್ ಹಾಗೂ ಕೈಗಾರಿಕೆಗಳಿಗೆ ದಿನಕ್ಕೆ ಎಷ್ಟು ಅವದಿ ಹಾಗೂ ಯಾವ ಪ್ರಮಾಣದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ (ವಿವರ ನೀಡುವುದು);

ಪ್ರಸ್ತುತ ರಾಜ್ಯದ ನಗರ ಪ್ರದೇಶಗಳಲ್ಲಿ ಗೃಹ ಬಳಕೆ, ಕೈಗಾರಿಕೆಗಳಿಗೆ ದಿನದ 24 ಗಂಟೆಗಳ ಅವಧಿಗೆ ಹಾಗೂ ಗ್ರಾಮೀಣ ಪ್ರದೇಶಗಳ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಬಳಕೆದಾರರಿಗೆ ದಿನದ 6 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ಮತ್ತು 6 ಗಂಟೆಗಳ ಅವಧಿಗೆ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಗೃಹ ಬಳಕೆ, ಕೈಗಾರಿಕೆ ಹಾಗೂ ಕೃಷಿ ಪಂಪುಸೆಟ್ಟುಗಳು ಬಳಸಿದ ವಿದ್ಯುತ್ತಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ.

ಕ್ರಮ ಸಂಖ್ಯೆ	ವಿವರ	ಬಳಸಿದ ವಿದ್ಯುತ್ತಿನ ಪ್ರಮಾಣ (ಮಿಲಿಯನ್ ಯೂನಿಟ್ಟುಗಳಲ್ಲಿ)
1	ಗೃಹ ಬಳಕೆ	6,268
2	ಕೈಗಾರಿಕೆ	6,907
3	ಕೃಷಿ ಪಂಪುಸೆಟ್ಟುಗಳು	8,540

ಆ) ರಾಜ್ಯದಲ್ಲಿ ಸಂಪೂರ್ಣವಾಗಿ ಬಳಕೆಗೆ ಬೇಕಾಗಿರುವ ಅವಶ್ಯಕತೆಯಿರುವ ವಿದ್ಯುತ್ ಪ್ರಮಾಣವೆಷ್ಟು ಹಾಗೂ ಹಾಲಿ ಲಭ್ಯವಿರುವ ವಿದ್ಯುತ್‌ನ ಪ್ರಮಾಣವೆಷ್ಟು:

ರಾಜ್ಯದಲ್ಲಿ 2008–09 ನೇ ಸಾಲಿಗೆ ಅಗತ್ಯವಿರುವ ಅನಿರ್ಬಂಧೀತ ಅಂದಾಜು ವಿದ್ಯುತ್ ಬೇಡಿಕೆ 46,965 ಮಿಲಿಯನ್ ಯೂನಿಟ್ಸುಗಳು. ರಾಜ್ಯದ ಆಂತರಿಕ ಮೂಲಗಳಿಂದ ವಿದ್ಯುತ್ ಉತ್ಪಾದನೆ **23,450** ಮಿಲಿಯನ್ ಯೂನಿಟ್ಸುಗಳು ಹಾಗೂ ಕೇಂದ್ರ ಸರ್ಕಾರದ ವಿದ್ಯುತ್ ಕೇಂದ್ರಗಳಿಂದ ಲಭ್ಯವಾಗುವ ರಾಜ್ಯದ ಪಾಲು **11,500** ಮಿಲಿಯನ್ ಯೂನಿಟ್ಸುಗಳು.

ಇ) ವಿದ್ಯುತ್ ಅಭಾವ ನೀಗಿಸಲು 2008 ನೇ ಸಾಲಿನಿಂದ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?

ವಿದ್ಯುತ್ ಅಭಾವ ನೀಗುವ ಸಲುವಾಗಿ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

4. ಕರ್ನಾಟಕ ಸರ್ಕಾರವು ದಿನಾಂಕ 17–12–2008 ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
5. ಕರ್ನಾಟಕ ಸರ್ಕಾರವು ದಿನಾಂಕ 30–12–2008 ರಂದು ಆದೇಶ ಹೊರಡಿಸಿ ಎಲ್ಲಾ ವಿದ್ಯುತ್ ಉತ್ಪಾದಕರು ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ವಿದ್ಯುತ್ತನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡಬೇಕೆಂದು ಆದೇಶ ನೀಡಿದೆ.
6. ಇದರ ಜೊತೆಗೆ ರಾಜ್ಯವು ಇಂಡಿಯನ್ ಎನರ್ಜಿ ಎಕ್ಸ್‌ಚೇಂಜ್ ಮುಖಾಂತರ ಮತ್ತು ಹೊರ ರಾಜ್ಯವಾದ ಛತ್ತೀಸ್‌ಗಢ್ ದಿಂದ ವಿದ್ಯುತ್ತನ್ನು ಪಡೆಯುತ್ತಿದೆ.
7. ಈ ರೀತಿಯಾಗಿ ಹೆಚ್ಚುವರಿ ವಿದ್ಯುತ್ತಿಗೆ ನವೆಂಬರ್–2008 ರಿಂದ ಜನವರಿ–2009 ರವರೆಗೆ 1008 ಕೋಟಿ ರೂ.ಗಳನ್ನು ವೆಚ್ಚ್ ಮಾಡಲಾಗಿದ್ದು, ಕರ್ನಾಟಕ ಸರ್ಕಾರವು 350 ಕೋಟಿ ರೂ.ಗಳನ್ನು ನೀಡಿದ್ದು, ಮಿಕ್ಕ ಹಣವನ್ನು ವಿದ್ಯುತ್ ಸರಬರಾಜು ಕಂಪನಿಗಳು ಭರಿಸುತ್ತವೆ.

ಸಂಖ್ಯೆ: ಇಎನ್ 12 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.